# 62ನೇ ಕನ್ನಡ ರಾಜ್ಯೋತ್ಸವ (2017–18)
## ವರದಿ

ದಿನಾಂಕ 02–11–2017 ಮತ್ತು 03–11–2017 ರಂದು ನಮ್ಮ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.
ಒಂದು ಮತ್ತು ಎರಡನೇ ತರಗತಿಯ ವಿದ್ಯಾರ್ಥಿಗಳು ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಎಲ್ಲಾದರೂ ಇರು, ಎಂತಾದರೂ ಇರು
ಎಂದೆಂದಿಗೂ ನೀ ಕನ್ನಡವಾಗಿರು
ಕನ್ನಡವೇ ಸತ್ಯ, ಕನ್ನಡವೇ ನಿತ್ಯ

ಎಂಬ ಕವಿವಾಣಿಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಮೊದಲು ನಮ್ಮ ನೆಚ್ಚಿನ ಪ್ರಾಂಶುಪಾಲರಾದ ಶ್ರೀಮತಿ ಗೀತಾ ದೀಕ್ಷಿತ್ ರವರು ಕನ್ನಡ ಜ್ಯೋತಿಯನ್ನು ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ವಿದ್ಯಾರ್ಥಿಗಳು ತಮ್ಮ ಬರವಣಿಗೆಯ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಅನೇಕ ಕವಿಗಳ ಸಾಧನೆಯನ್ನು ಕುರಿತು ಮಾಹಿತಿ ನೀಡದರು.

ಎಡರನೇ ದಿನದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಬಗ್ಗೆ ಹಾಗೂ ನಮ್ಮ ನಾಡಿನ ವಿವಿಧ ಕಲಾ ಪ್ರಕಾರಗಳಾದ ಕಂಸಾಳೆ, ಜಾನಪದ, ಯಕ್ಷಗಾನ, ಡೊಳ್ಳು ಕುಣಿತ ಇನ್ನೂ ಮುಂತಾದ ಕಲಾ ಪ್ರಕಾರಗಳ ಬಗ್ಗೆ ಮಾಹಿತಿ ನೀಡಿ ಜಾನಪದ ಗೀತೆಯೊಂದಕ್ಕೆ ಅಮೋಘ ನೃತ್ಯ ಪ್ರದರ್ಶನ ನೀಡಿದರು.

ಕೊನೆಯದಾಗಿ ಪ್ರಾಂಶುಪಾಲರು ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಷಯಗಳನ್ನು ಕೋರಿದರು ಮತ್ತು ಮಕ್ಕಳ ಉತ್ಸಾಹದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಇಡೀ ಶಾಲೆಯ ಎಲ್ಲಾ ಸೂಚನಾ ಫಲಕಗಳು ಕವಿಗಳ ಭಾವಚಿತ್ರ, ಕವಿತೆಗಳು ಮತ್ತು ಸುಭಾಷಿತ, ಗಾದೆಗಳೊಂದಿಗೆ ರಾರಾಜಿಸುತ್ತಿದ್ದವು. ಎಲ್ಲಾಕಡೆ ಕನ್ನಡ ನಾಡು, ನುಡಿ, ಸಂಸ್ಕೃತಿಯ ಡಿಂಡಿಮ ಭಾರಿಸುತ್ತಿತ್ತೆಂದರೇ ತಪ್ಪಾಗಲಾರದು.

ಜೈ ಕರ್ನಾಟಕ ಮಾತೆ


NATIONAL PUBLIC SCHOOL




NATIONAL PUBLIC SCHOOL


NATIONAL PUBLIC SCHOOL




NATIONAL PUBLIC SCHOOL



